

# ಅಳಿಯುತ್ತಿದೆಯೇ ಬಿಳಿ ಮಂಗ?

**ಹಾಲು ಮೈಬಣ್ಣದ ಮಂಗ ಅಪರೂಪ ಮತ್ತು ಆಕರ್ಷಕವಾದದ್ದು. ಸುಮಾತ್ರಾ ಮತ್ತು ಬೋರ್ನಿಯಾ ದ್ವೀಪಗಳಲ್ಲಿ ಮಾತ್ರ ಕಾಣಸಿಗುವ ಈ ಮಂಗಗಳು ಅಳಿವಿನಂಚಿನಲ್ಲಿವೆ. ಇವುಗಳನ್ನು ಬೋರ್ನಿಯಾ ಒರಾಂಗುಟಾನ್ಸ್ ರಕ್ಷಣಾ ಪ್ರತಿಷ್ಠಾನ ರಕ್ಷಿಸುವ ಕೆಲಸ ಮಾಡುತ್ತಿದೆ.**

■ ಸುಭಾಸ ಯಾದವಾಡ

ಇದು ಆರು ವರ್ಷದ ಮಂಗ. ಇದರ ಮೈಬಣ್ಣ ಹಾಲಿನಂತಿದೆ. ಮೈಮೇಲಿನ ರೋಮಗಳು ರೇಷ್ಮೆಯಂತೆ ನುಣುಪಾಗಿವೆ. ನೋಡಲು ತುಂಬ ಆಕರ್ಷಕವಾಗಿದೆ. ಇಂಥದೊಂದು ಬಿಳಿಯಾದ ಮುದ್ದು ಮಂಗ, ಇದನ್ನು ಬಿಟ್ಟರೆ, ಜಗತ್ತಿನಲ್ಲಿ ಬೇರೆ ಎಲ್ಲೂ ಇಲ್ಲ ಎಂಬುದು ಇದರ ವಿಶೇಷತೆ!

ತೀರ ಅಪರೂಪವಾದದ್ದು ಅತೀ ಅಪಾಯವನ್ನು ಎದುರಿಸಬೇಕಾಗುತ್ತದೆ. ಹಾಗಾಗಬಾರದೆಂದು, ಬೋರ್ನಿಯಾ ಒರಾಂಗುಟಾನ್ಸ್ ರಕ್ಷಣಾ ಪ್ರತಿಷ್ಠಾನ ಈ ಅನನ್ಯ ಬಿಳಿ ಮಂಗವನ್ನು ರಕ್ಷಿಸಲು ಮುಂದಾಗಿದೆ. ಈ ಪ್ರತಿಷ್ಠಾನದ ಕಣ್ಣಿಗೆ ಈ ಮಂಗ ಕಾಣಿಸಿಕೊಂಡಾಗ, ಅದು ತೀರಾ ನಿತ್ರಾಣ ಸ್ಥಿತಿಯಲ್ಲಿತ್ತು. ಕಡಿಮೆ ತೂಕ, ಆಹಾರದ ಕೊರತೆ, ನಿರ್ಜಲೀಕರಣದಿಂದ ಬಳಲಿ ರೋಗಗ್ರಸ್ತವಾಗಿತ್ತು. ಅನಿವಾರ್ಯವಾಗಿ ಇದನ್ನು ಅದರ ತಾಯಿಯಿಂದ ಬೇರ್ಪಡಿಸಿ, ಚಿಕಿತ್ಸೆಗಾಗಿ ಆಸ್ಪತ್ರೆಗೆ ಸೇರಿಸಬೇಕಾಯಿತು. ಇದಕ್ಕೆ ಬೇಕಾದ ಎಲ್ಲ ಉಪಚಾರ ನೀಡಿ, ಅದನ್ನು ಸದೃಢ ಮಂಗವಾಗಿ ಬೆಳೆಸಿದ ಕೀರ್ತಿ ಆ ಪ್ರತಿಷ್ಠಾನಕ್ಕೆ ಸಲ್ಲುತ್ತದೆ.

ನಂತರ ಈ ಮಂಗನನ್ನು ಅರಣ್ಯದಲ್ಲಿರುವ ಇದರ ಕುಟುಂಬದ ಜೊತೆಗೆ ಸೇರಿಸಲಾಯಿತು. ಕಾಲಗರ್ಭದಲ್ಲಿ ಅನಾಮಧೇಯವಾಗಿ ಸತ್ತು ಹೋಗಬೇಕಾದ, ಅಲ್ಬಾ ಎಂಬ ಆ ಬಿಳಿ ಮಂಗವನ್ನು ರಕ್ಷಿಸಿ, ಪೋಷಿಸಿ ಮತ್ತೆ ಅದು ತನ್ನ ತಂದೆ, ತಾಯಿ, ತಮ್ಮ, ತಂಗಿಯರನ್ನು ಸೇರಿಕೊಳ್ಳುವಂತೆ ಮಾಡಿದ್ದು ನಿಜಕ್ಕೂ ಸ್ತುತ್ಯಾರ್ಹ ಸಂಗತಿ.

ಈಗಲೂ ಅಲ್ಬಾ ಎಂಬ ಒರಾಂಗುಟಾನ್ಸ್ ಜಾತಿಯ ಈ ಬಿಳಿ ಮಂಗ ಸಂಪೂರ್ಣವಾಗಿ ಸುರಕ್ಷಿತವಾಗಿದೆ ಎಂದು ಬೋರ್ನಿಯಾದ ರಕ್ಷಣಾ ಪ್ರತಿಷ್ಠಾನ ಭಾವಿಸಿಲ್ಲ. ಹೀಗಾಗಿ ಇದರ ಮೇಲೆ ಒಂದು ಕಣ್ಣು ಇಟ್ಟಿದೆ. ಇದಕ್ಕೇನಾದರೂ ಅಪಾಯ ಇದೆ ಎಂದೆನಿಸಿದರೆ, ಇದರ ರಕ್ಷಣೆಗೆ ಧಾವಿಸಲು ಅದು ಸನ್ನದ್ಧವಾಗಿಯೇ ಇದೆ.



ಒರಾಂಗುಟಾನ್ಸ್ ಎಂಬ ಜಾತಿಯ ಮಂಗಗಳೇ ಅಪಾಯದ ಅಂಚಿನಲ್ಲಿವೆ. ಇಂಡೊನೇಷ್ಯಾದ ಸುಮಾತ್ರಾ ಮತ್ತು ಬೋರ್ನಿಯಾ ದ್ವೀಪಗಳಲ್ಲಿ ಮಾತ್ರ ಕಂಡುಬರುವ ಈ ಮಂಗಗಳ ಸಂತತಿ 1970ರಿಂದ ಕ್ಷೀಣಿಸುತ್ತಲೇ ಬಂದಿದೆ. ಅವುಗಳ ರಕ್ಷಣೆಗೆಂದೇ ಬೋರ್ನಿಯಾ ಒರಾಂಗುಟಾನ್ಸ್ ರಕ್ಷಣಾ ಪ್ರತಿಷ್ಠಾನ ಹುಟ್ಟಿಕೊಂಡಿದೆ. ಅದರಲ್ಲೂ ಆ ಜಾತಿಯಲ್ಲಿ ಹುಟ್ಟಿದ, ಈ ವಿಶ್ವದ ಏಕಮೇವ ಬಿಳಿ ಮಂಗ, ಆದಷ್ಟು ಹೆಚ್ಚು ದಿನ ಬಾಳಲಿ ಎಂಬುದು ಆ ಪ್ರತಿಷ್ಠಾನದ ಬಯಕೆ ಹಾಗೂ ಕಾಳಜಿ ಆಗಿದೆ. ■